# ಗುಬ್ಬಚ್ಚಿಗಳ ಬಿಡುಗಡೆ



ದಯಾಳು ವಾದ ಒಬ್ಬ ವ್ಯಕ್ತಿಯು ಒಂದು ದಿನ ದಾರಿಯಲ್ಲಿ ನಡೆದು ಹೋಗುತ್ತಿರುವಾಗ, ಒಂದು ಗೂಡಿನ ತುಂಬ ಗುಬ್ಬಿಗಳನ್ನು ತುಂಬಿಸಿಕೊಂಡ ಒಬ್ಬ ಹುಡುಗನನ್ನು ಕಂಡನು. "ಆ ಪಕ್ಷಿಗಳನ್ನು ಏತಕ್ಕೆ ಹಿಡಿದಿಟ್ಟುಕೊಂಡಿರುವಿ?" ಆ ವ್ಯಕ್ತಿಯು ಕೇಳಿದನು.

"ನನ್ನ ಮನೆಗೆ ಒಯ್ದು ನನ್ನ ಬೆಕ್ಕಿಗೆ ತಿನ್ನಿಸುವೆ" ಹುಡುಗನ ಉತ್ತರ.

ಆ ವಯಸ್ಸಾದ ವ್ಯಕ್ತಿಯು, ಹುಡುಗನು ಅದನ್ನು ಮಾರಲು ಬಯಸುತ್ತಿರುವುದಾದರೆ ತಾನು ಬೆಲೆ ಕೊಡಲು ಸಿದ್ಧನಿದ್ದೇನೆಂದು ತಿಳಿಸಿದನು. ಹಾಗೂ ಆ ಹುಡುಗನು ಕೇಳಿದಷ್ಟು ಬೆಲೆ ಕೊಟ್ಟು ಆ ಪಕ್ಷಿಗಳನ್ನು ಕೊಂಡುಕೊಂಡನು.

ತಾನು ಕೇಳಿದ ಹಣವು ಹೆಚ್ಚಿನದ್ದಾಗಿದ್ದುದರಿಂದ ಈ ಮನುಷ್ಯನಿಗೆ ತಲೆ ಕೆಟ್ಟಿದೆ ಎಂದುಕೊಂಡ ಹುಡುಗನು ಆ ಪಂಜರವನ್ನು ಅಲ್ಲಿ ಇಟ್ಟು ಬೇಗ ಬೇಗನೇ ಅಲ್ಲಿಂದ ಹೊರಟು ಹೋದನು– ಈ ಮನುಷ್ಯನೇನಾದರೂ ಮನಸ್ಸು ಬದಲಾಯಿಸಬಹುದೆಂಬುದು ಆತನ ಆತಂಕವಾಗಿತ್ತು.

ಈಗ ಆ ವ್ಯಕ್ತಿಯು ಆ ಪಕ್ಷಿಗಳನ್ನು ಏನು ಮಾಡಿದನು ಗೊತ್ತೇ? ಒಂದು ವಿಶಾಲವಾದ ಮೈದಾನಕ್ಕೊಯ್ದು, ಪಂಜರವನ್ನು ತೆರೆದು ಆ ಪಕ್ಷಿಗಳನ್ನು ಸ್ವತಂತ್ರವಾಗಿ ಹಾರಿಹೋಗಲು ಬಿಟ್ಟನು. ಒಂದು ಕ್ರೂರವಾದ ಸಾವಿನ ಬದಲಾಗಿ, ಆ ಚಿಕ್ಕ ಪಕ್ಷಿಗಳಿಗೆ ಜೀವನ, ಸ್ವಾತಂತ್ರ್ಯ, ಸಮಾಧಾನ ಕೊಡಲ್ಪಟ್ಟಿತು! ಓಹ್! ಎಂಥಹ ಬದಲಾವಣೆ!

ನೀವು ನಿಮ್ಮ ಪಾಪಗಳಿಂದ ಮತ್ತು ಅದಕ್ಕೆ ಯೋಗ್ಯವಾದ ಶಿಕ್ಷೆಯಿಂದ ಬಿಡುಗಡೆ ಹೊಂದಿರುವಿರೋ? ಪಾಪಿಗಳನ್ನು ರಕ್ಷಿಸುವ, ನಿಮ್ಮನ್ನು ಪ್ರೀತಿ ಮಾಡಿ, ಪಾಪಗಳಿಂದ ಬಿಡುಗಡೆ ಮಾಡಲು ಬಯಸುವ, ಯೇಸುಸ್ವಾಮಿಯೊಂದಿಗೆ ಮುಖಾಮುಖಿಯಾಗಿದ್ದೀರಾ?

ಮತ್ತಾಯ 10:31ರಲ್ಲಿ ಹೇಳಿದಂತೆ "*ಆದದರಿಂದ ಹೆದರಬೇಡಿರಿ, ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು*" ಆತನು ನಿಮ್ಮ ಬಿಡುಗಡೆಗಾಗಿ, ಬಹಳ ಹಣಕ್ಕಿಂತಲೂ ಹೆಚ್ಚಿನದ್ದನ್ನು ನೀಡಿದ್ದಾನೆ. ಆತನು ಕಲ್ವಾರಿಯ ಗುಡ್ಡದಲ್ಲಿ ತನ್ನ ಸ್ವಂತ ರಕ್ತವನ್ನು ನಮಗಾಗಿ ಸುರಿಸಿದ್ದಾನೆ. ನಮಗಾಗಿ ಮರಣಹೊಂದಿದ್ದಾನೆ. ಆತನ ಬಳಿಗೆ ಬನ್ನಿರಿ! ಆತನಲ್ಲಿ *ವಿಶ್ವಾಸವಿಡಿರಿ!*

"*ಆದದರಿಂದ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು*". (ಯೋಹಾನ : 36)

ಸಂಗ್ರಹ : ಸುನಯನ ವಾಲ್ಟರ್ಸ್